ಸಾವಳಗಿಯಲ್ಲಿ ವಾಹನ ನಿಲ್ದಾಣದ ನಿರ್ಮಾಣ:

೧೫೩೨. ಶ್ರೀ ಬಾಬುರೆಡ್ಡಿ ವಿ. ತುಂಗಳ್(ಬೀಳಗಿ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಜಮಖಂಡಿ ತಾಲ್ಲೂಕಿನ ಸಾವಳಗಿ ಹೋಬಳಿಯಲ್ಲಿ ಸಾರಿಗೆ ಸಂಸ್ಥೆಯು ಬಸ್ ನಿಲ್ದಾಣವನ್ನು ನಿರ್ಮಿಸಲು ನಿರ್ಧರಿಸಿದೆಯೇ ?

ಆ) ಹಾಗಿದ್ದರೆ ಈ ಬಸ್ ನಿಲ್ದಾಣದ ಅಂದಾಜು ವೆಚ್ಚವೆಷ್ಟು ಹಾಗೂ ಎಂದಿನಿಂದ ಕೆಲಸ ಆರಂಭ ಮಾಡಲಾಗುವುದು.

ಶ್ರೀ ಪಿ. ಜಿ. ಆರ್. ಸಿಂಧ್ಯ(ಸಾರಿಗೆ ಮಂತ್ರಿಗಳು) —

ಅ) ಹೌದು.

ಆ) ಬಸ್ ನಿಲ್ದಾಣದ ಅಂದಾಜು ವೆಚ್ಚ ೧.೪೦ ಲಕ್ಷ ರೂ. ಗಳು. ಪ್ರಸಕ್ತ ವರ್ಷದಲ್ಲಿ ಪ್ರಾರಂಭಿಸಲಾಗುವುದು.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಅಧ್ಯಕ್ಷರೇ, ೧೨ನೇ ತಾರೀಖಿನ ದಿವಸ ಬೇರೆ ಪ್ರಶ್ನೆ ಮುಖಾಂತರ ನಾನು ಕೇಳಿದ್ದ ಒಂದು ಪ್ರಶ್ನೆಗೆ ಸಾರಿಗೆ ಸಚಿವರು ಸಮರ್ಪಕ ಉತ್ತರ ಕೊಟ್ಟಿರುವುದರಿಂದ ಹೆಚ್ಚಿಗೆ ಕೇಳದೆ ನಿಲ್ದಾಣದ ಶಂಕುಸ್ಥಾಪನೆಗೆ ಯಾವಾಗ ಬರುತ್ತೀರೆಂದು ಕೇಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅಧಿವೇಶನ ಮುಗಿದ ನಂತರ.

ಪೋಲೀಸ್ ಠಾಣೆಯಲ್ಲಿ ನಡೆದ ಸಾವುಗಳು

೧೪೧೧. ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ (ಕುಂದಾಪುರ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ೧೯೮೬ ರಿಂದ ೧೯೮೮ರ ಮಾರ್ಚ್ ೩೧ರವರೆಗೆ ಎಷ್ಟು ಪೋಲೀಸ್ ಠಾಣೆಯಲ್ಲಿ ನಡೆದ ಜನರ ಸಾವುಗಳು ವರದಿಯಾಗಿವೆ.

ಆ) ಮೇಲ್ಕಂಡ ಪ್ರಕರಣಗಳಲ್ಲಿ ಎಷ್ಟು ಜನ ತಪ್ಪಿತಸ್ಥರ ಮೇಲೆ ಸರ್ಕಾರವು ಇಲಾಖಾ ಹಾಗೂ ಮತ್ತಿತರ ಕ್ರಮ ಕೈಗೊಂಡಿದೆ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ)
೧೯೮೬	೬
೧೯೮೭	೧
೧೯೮೮	೩

(೩೧-೩-೮೮ರ ವರೆಗೆ)

ಆ) ಇಲಾಖಾ ಕ್ರಮ—೧೨ ಜನ ತಪ್ಪಿತಸ್ಥರ ಮೇಲೆ.
ಕ್ರಿಮಿನಲ್ ಮೊಕದ್ದಮೆಗಳು —೯ ಜನ ತಪ್ಪಿತಸ್ಥರ ಮೇಲೆ

ಶ್ರೀ ಜಿ. ಎಸ್. ಆಚಾರ್ (ಪ್ರತಾಪಚಂದ್ರ ಶೆಟ್ಟಿಯವರ ಪರವಾಗಿ).—ಮಾನ್ಯ ಅಧ್ಯಕ್ಷರೇ, ಈ ಸ್ಫೋಟನ್ ಹೊರಗಡೆ ಆಗುವಂಥ ಸಾವು ಅಥವಾ ಕೊಲೆ ಅನೇಕ ಇರುತ್ತವೆ ಆ ಬಗ್ಗೆ ನಾವು ಸುಳಿವು ನೀಡಿದರೆ ತಕ್ಷಣ ಕ್ರಮ ಕೈಗೊಳ್ಳುತ್ತೇವೆನ್ನುತ್ತಾರೆ ಉದಾಹರಣೆಗೆ ೮೬ರಲ್ಲಿ ೬, ೮೭ರಲ್ಲಿ ೧, ೮೮ರಲ್ಲಿ ಮೊದಲ ಮೂರು ತಿಂಗಳಲ್ಲೇ ೩– ಹೀಗೆ ಒಂದು ರೀತಿಯಲ್ಲಿ ವಿಕ್ರಮ ಸಾಧನೆಯಾಗುತ್ತಿದೆ. ಈ ಸಾವುಗಳಿಗೆ ಕಾರಣಗಳೇನು ? ಇಲಾಖಾ ಕ್ರಮ ಅಥವಾ ಕ್ರಿಮಿನಲ್ ಮೊಕದ್ದಮೆ ಹೀಗೆ ಏನೇನು ಕ್ರಮ ಕೈಗೊಳ್ಳಲಾಗಿದೆ ? ಫಲಿತಾಂಶ ಏನಾಗಿದೆ ತಿಳಿಸುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—೧೯೮೬ನೇ ಇಸವಿಯಲ್ಲಿ ಆದಂಥ ಪ್ರಕರಣಗಳಲ್ಲಿ ಬೆಂಗಳೂರು ಜಿಲ್ಲೆಯ ಚನ್ನಪಟ್ಟಣ ಟೌನ್ ಠಾಣೆಯಲ್ಲಿ ಆದಂಥ ಘಟನೆ ೧೭-೧೦-೮೬ ರಂದು ಶ್ರೀ ದಾದಾಪೀರ್ ಎಂಬುವನು ಮೊಕದ್ದಮೆಯೊಂದರ ಮೇಲೆ ಬಂಧಿತನಾಗಿದ್ದನು ಬೆಳಿಗ್ಗೆ ೫-೧೫ಕ್ಕೆ ಸದರಿ ದಾದಾಪೀರ್ ಜೈನನ್ನು ಕುತ್ತಿಗೆಗೆ ಸಿಕ್ಕಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡನು ಅದರ ಬಗ್ಗೆ ನಾವು ನ್ಯಾಯಾಂಗ ತನಿಖೆಗೆ ಹಾಕಿದ್ದೇವೆ.

ಇದಾದ ಮೇಲೆ ಎರಡನೆಯ ಕೇಸ್ ಚನ್ನಪಟ್ಟಣದಲ್ಲಿ ಆಗಿದೆ. ಈ ಕೇಸ್‌ನಲ್ಲಿ ತಾಲ್ಲೂಕು ಮ್ಯಾಜಿಸ್ಟ್ರೇಟ್‌ರವರ ತನಿಖೆಯಲ್ಲಿ ಸಾವು ಹೃದಯಘಾತದಿಂದ ಸಂಭವಿಸಿದೆ ಎಂದು ಪೋಲೀಸ್ ಕರುಕುಳದಿಂದ ಆಗಿಲ್ಲವೆಂದು ವರದಿ ಬಂದಿದೆ. ಮೂರನೇ ಕೇಸ್ ಚಿತ್ರದುರ್ಗ ಜಿಲ್ಲೆಯದು. ಇದರಲ್ಲಿ ಆರೋಪಿ ಬೆಳ್ಳಿಗ್ಗೆ ೬-೪೫ ಗಂಟೆಗೆ ಲೀಡಿಂಗ್ ಚೈನ್ ಅನ್ನು ಕುತ್ತಿಗೆಗೆ ಹಾಕಿಕೊಂಡು ಗೊರ್ ಗೊರ್ ಎಂಬ ಶಬ್ದ ಮಾಡುತ್ತಿದ್ದುದನ್ನು ಸೆಂಟ್ರಿ ಪೇದೆ ಶಿವಮ್ಮಯ್ಯನು ನೋಡಿ ಠಾಣೆಯ ಕಸ ಗುಡಿಸುವ ನಿಂಗಪ್ಪನ ಸಹಾಯದಿಂದ ಕುತ್ತಿಗೆಗೆ ಹಾಕಿಕೊಂಡಿದ್ದ ಚೈನನ್ನು ತಪ್ಪಿಸಿ ಕೆಳಗೆ ಮಲಗಿಸಿ ಅವನಿಗೆ ಉಪಚರಿಸುತ್ತಿದ್ದಾಗ ಅವನು ಸತ್ತು ಹೋಗಿರುತ್ತಾನೆ. ಇದರಲ್ಲೂ ಕೂಡ ನ್ಯಾಯಾಧೀಶರು ಈ ಮೊಕದ್ದಮೆಯನ್ನು ಆತ್ಮಹತ್ಯೆ ಎಂದು ಮುಕ್ತಾಯ ಮಾಡಿದ್ದಾರೆ. ೪ನೇ ಕೇಸ್‌ನಲ್ಲಿ ಆತ ತನ್ನ ಧೋತಿಯನ್ನು ಬಿಚ್ಚಿ ಕುತ್ತಿಗೆಗೆ ನೇಣು ಹಾಕಿಕೊಂಡು ಸತ್ತಿದ್ದಾನೆ. ೫ನೇ ಕೇಸ್‌ನಲ್ಲಿ ಬೆಳಿಗ್ಗೆ ೧೧-೪೫ರಲ್ಲಿ ತೇಜಮೂರ್ತಿ ಎಂಬ ಆರೋಪಿಯು ಒದ್ದಾಡುತ್ತಿರತಕ್ಕಂಥಾದ್ದನ್ನು ನೋಡಿ ವೈದ್ಯರನ್ನು ಕರೆಯಿಸಿ ಪರೀಕ್ಷೆ ಮಾಡಿಸಲು ಆತನು ಸತ್ತು ಹೋಗಿದ್ದಾನೆಂದು ತಿಳಿದು ಬಂತು. ತಾಲ್ಲೂಕು ಮ್ಯಾಜಿಸ್ಟ್ರೇಟ್‌ರವರ ತನಿಖೆಯಲ್ಲಿ ಸಾವು ಹೃದಯಾಘಾತದಿಂದ ಸಂಭವಿಸಿತೆಂದು ತಿಳಿದು ಬಂದಿದೆ. ಇದಾದ ಮೇಲೆ ಆರನೇ ಕೊನೆಯ ಕೇಸ್ ಬಿಜಾಪುರ ಜಿಲ್ಲೆ ಮಹಾಲಿಂಗಪುರ ಠಾಣೆಯಲ್ಲಿ ರಾತ್ರಿ ೧೧ ಗಂಟೆಯಲ್ಲಿ ಮುಖ್ಯಪೇದೆ ಚವಾಣ್ ಠಾಣೆಗೆ ೧೫೦ ಅಡಿ ದೂರದಲ್ಲಿ ಬಂದ್ಯದ ಮತ್ತಿನಲ್ಲಿದ್ದ ಶಿವಲಿಂಗಪ್ಪ ಶಿರೋಳ್ ಮಾದಲ್ಗಿ ಎಂಬ ಹಳ್ಳಿಯವನ ಜೊತೆ ಜಗಳವಾಡಿ ಆತನಿಗೆ ಹೊಡೆದ ಪರಿಣಾಮ ಸದರಿ ಶಿವಲಿಂಗಪ್ಪ ಶಿರೋಳ್ ಕೆಳಗೆ ಬಿದ್ದು ರಕ್ತ ವಾಂತಿ ಮಾಡಿಕೊಂಡನೆಂದೂ ಸದರಿ ಮುಖ್ಯ ಪೇದೆಯು ಆತನನ್ನು ಬೈಸಿಕಲ್ ಮೇಲೆ ತೆಗೆದುಕೊಂಡು ಹೋಗುವಾಗ ಮೃತಪಟ್ಟನೆಂದೂ ಆತನ ದೇಹವನ್ನು ಬಚ್ಚಿಟ್ಟನೆಂದೂ ಸಂದೇಹವಿದೆ ಅಲ್ಲದೆ ಸದರಿ ವ್ಯಕ್ತಿಯನ್ನು ಠಾಣೆಗೆ ಕರೆದುಕೊಂಡು ಬಂದು ಹೊಡೆದು ಸಾಯಿಸಿದನೆಂದು ಸಂಶಯವಿದೆ ಸದರಿ ಮುಖ್ಯ ಪೇದೆ ಮೇಲೆ ಇಲಾಖಾ ವಿಚಾರಣೆ ಮತ್ತು ಕ್ರಿಮಿನಲ್ ಮೊಕದ್ದಮೆ ಹಾಕಲಾಗಿದೆ ಅದು ನ್ಯಾಯಾಲಯದ ವಿಚಾರಣೆಯಲ್ಲಿದೆ. ೧೯೮೭ರಲ್ಲಿ ಒಂದು ಪ್ರಕರಣವಾಗಿದೆ ಈ ಪ್ರಕರಣವನ್ನು ತಾಲ್ಲೂಕು ಮ್ಯಾಜಿಸ್ಟ್ರೇಟ್‌ರವರು ತನಿಖೆ ಮಾಡಿ ಸದರಿ ಸಾವಿನಲ್ಲಿ ಪೋಲೀಸರ ಕೈವಾಡವಿಲ್ಲವೆಂದು ವರದಿ ಮಾಡಿದ್ದಾರೆ ೧೯೮೮ರಲ್ಲಿ ೩ ಪ್ರಕರಣಗಳು ಆಗಿವೆ. ಮೊದಲನೆಯದು, ಶಿವಮೊಗ್ಗ ಜಿಲ್ಲೆಗೆ ಸಂಬಂಧಪಟ್ಟಿದ್ದು. ಇದಕ್ಕೆ ಸಂಬಂಧಪಟ್ಟಂತೆ ಒಬ್ಬ ಮುಖ್ಯ ಪೇದೆ ಮತ್ತು ೬ ಜನ ಪೇದೆಗಳ ಮೇಲೆ ಕೋಟೆ ಠಾಣೆ ಕ್ರಮಸಂಖ್ಯೆ ೮೮೮ ಕಲಂ ೩೪೧, ೩೦೨, ೩೨೪, ೩೪ ಭಾ. ದಂ. ಸಂ. ಪ್ರಕಾರ ಮೊಕದ್ದಮೆ ಹೂಡಿ ಇದು ಸೆಷನ್ಸ್ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದೆ. ಎರಡನೆಯದು ಯಾವುದು ಇದೆ ಇದರಲ್ಲಿ ಮುಖ್ಯ ಪೇದೆ ಧಾನಗರ್ ಮೇಲೆ ಉಪ ವಿಭಾಗ ಮ್ಯಾಜಿಸ್ಟ್ರೇಟ ರವರು ಕೊಟ್ಟ ದೂರಿನ ಮೇಲೆ ಪ್ರಥಮ ದರ್ಜೆ ನ್ಯಾಯಾಧೀಶರ ಮುಂದೆ ವಿಚಾರಣೆಯಲ್ಲಿದೆ. ಕೊನೆಯದು ಗುಲ್ಬರ್ಗ ಜಿಲ್ಲೆಗೆ ಸಂಬಂಧಿಸಿದ್ದು ರಾತ್ರಿ ಬೆಳೆಯನ್ನು ಕದಿಯುತ್ತಿದ್ದಾಗ ಸಿಕ್ಕಿಬಿದ್ದನೆಂಬ ಆಪಾದನೆ ಮೇಲೆ ಹೇಮಾಜಿಯನ್ನು ತಂದು ಬಿಟ್ಟರು. ಸದರಿ ಹೇಮಾಜಿಯನ್ನು ಆಳಂದ್ ಠಾಣೆಯ ವಿರಾಮ ಕೊಠಡಿಯಲ್ಲಿ ಕುಳ್ಳರಿಸಿಸಲಾಗಿತ್ತು. ಸುಮಾರು ೪-೦೦ ಗಂಟೆಯಲ್ಲಿ ವಿರಾಮ ಕೊಠಡಿಯಲ್ಲಿ ದೊರೆತ ಹಗ್ಗದಿಂದ ಸೀಲಿಂಗ್ ಫ್ಯಾನ್‌ನ ಕೊಂಡಿಗೆ ಸಿಕ್ಕಿಸಿ ನೇಣು ಹಾಕಿಕೊಂಡು ಸತ್ತಿರುತ್ತಾನೆಂದು ಸುದ್ದಿ ಬಂದಿದೆ. ಇದರ ಬಗ್ಗೆ ಜಿಲ್ಲಾ ಮ್ಯಾಜಿಸ್ಟ್ರೇಟರಿಂದ ತನಿಖೆಯಾಗುತ್ತಿದೆ.

ಶ್ರೀ ಜೆ. ಎಸ್. ಆಚಾರ್.—ಹೆಚ್ಚಿನ ಪ್ರಕರಣಗಳಲ್ಲಿ ತಾಲ್ಲೂಕು ಮ್ಯಾಜಿಸ್ಟ್ರೇಟ್‌ರವರು ತನಿಖೆ ಮಾಡಿ ಆತ್ಮಹತ್ಯೆಯೆಂದು ತೀರ್ಮಾನಕ್ಕೆ ಬರಲಾಗಿದೆ. ಪೇದೆಗಳು ಮತ್ತು ಮುಖ್ಯ ಪೇದೆಗಳು ಮಾತ್ರ ಎಲ್ಲಿ ಬರುತ್ತಾರೆ ಅಂತಹ ಕಡೆಗಳಲ್ಲಿ ಅವರ ಮೇಲೆ ಇನ್ನೂ ಕ್ರಮ ಮುಂದುವರಿಯುತ್ತಿದೆಯೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳುತ್ತಿದಾರೆ.

ಗಿರಿ–ಹಿರಿ ಎ. ಎಂ.

ಒಂದು ಉದಾಹರಣೆಯನ್ನು ಕೊಡಬೇಕಾದರೆ, ಮೊನ್ನೇ ತಾನೇ ನಾನು ಒಂದು ಬೈಂಡೂರು ಸ್ಟೇಷನ್ ವಿಚಾರದಲ್ಲಿ ಅನುಮಾನದ ಕೊಲೆಯ ವಿಚಾರವಾಗಿ ಹೇಳಿದಾಗ ಇಲ್ಲಿ ವಿಧಾನ ಸಭೆಯಲ್ಲಿ ಎತ್ತಿದ ಮರು ದಿನವೇ ಸಿ. ಓ. ಡಿ. ಅಧಿಕಾರಿಗಳು ಅಲ್ಲಿಗೆ ಹೋಗಿದ್ದಾರೆ. ಅಧಿಕಾರಿಗಳು ಹೋಗುವಂಥ ದೂರವಾಣಿ ಸಂದೇಶ ಮೊದಲೇ ಬಂದಿತ್ತು. ಅಲ್ಲಿ ಅವರಿಗೆ ಬೇಕಾದಂಥ ರೀತಿಯಲ್ಲಿ ಐ ಬಿ ಯಲ್ಲಿ ವ್ಯವಸ್ಥೆಯಾಗಿತ್ತು. ಯಾರನ್ನು ಸಾಕ್ಷಿಗಳನ್ನು ಮಾಡಿಕೊಳ್ಳಬೇಕು, ಅದನ್ನು ಮಾತ್ರ ತನಿಖೆ ಮಾಡಿ, ಅದಕ್ಕೆ ದೂರು ಬರುತ್ತದೆ. ತಮಗೆ ಆದರ ಬಗ ರಿಪೋರ್ಟ್ ಬರುತ್ತದೆ. ನಾನು ಕೇಳುವಂಥಾದ್ದು ಈ ಜನತೆಯ ಮುಂದೆ ಅನುಮಾನ ಇದೆ. ಈ ಅನುಮಾನ ಹೋಗಬೇಕಾದರೆ ತಾಲ್ಲೂಕು ಮ್ಯಾಜಿಸ್ಟೇಟರಿಂದ ತನಿಖೆ ಮಾಡಿಸುವುದಕ್ಕೆ ಬದಲಾಗಿ ನ್ಯಾಯಾಂಗ ವಿಚಾರಣೆಯನ್ನು ಹಾಗೂ ಅದಕ್ಕೆ ಮೇಲ್ಮಟ್ಟದ ವಿಚಾರಣೆಯನ್ನು ಮಾಡಿಸಿ ಜನರ ಮನಸ್ಸಿಗೆ ಭದ್ರತೆ ಆಗುವ ಹಾಗೆ ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಪ್ರತಿಯೊಂದು ಕೇಸ್‌ನಲ್ಲಿಯೂ ನ್ಯಾಯಾಂಗ ವಿಚಾರಣೆಯನ್ನು ಮಾಡತಕ್ಕಂಥದ್ದು ಸಾಧ್ಯವಾಗುವುದಿಲ್ಲ. ಅದಕ್ಕೆ ನಾವು ಅನುಸರಿಸಬೇಕಾದಂಥ ವಿಧಾನ ಬಹಳ ಕ್ಲಿಷ್ಟವಾದಂಥದ್ದು. ಡಿಪ್ಯುಟಿ ಮ್ಯಾಜಿಸ್ಟ್ರೇಟ್ ಅವರ ಮುಖಾಂತರ ನಾವು ಸಾಮಾನ್ಯವಾಗಿ ತನಿಖೆಯನ್ನು ಮಾಡಿಸಿದ್ದೇವೆ. ಈ ತನಿಖೆ ನಿಷ್ಪಕ್ಷ ಪಾತವಾಗಿ ಆಗುತ್ತದೆ ಎನ್ನತಕ್ಕಂಥ ಒಂದು ವಿಶ್ವಾಸ ನಮ್ಮಲ್ಲಿದೆ. ಇಂಥ ತನಿಖೆಯನ್ನು ಮಾಡಿಸಿ ನಾನು ಓದಿ ಹೇಳಿದಂತಹ ಎರಡು ಅಥವಾ ಮೂರು ಕೇಸ್‌ಗಳಲ್ಲಿ ಪೋಲೀಸರು ತಪ್ಪಿತಸ್ಥರು ಎಂದೂ ಗೊತ್ತಾದ ಮೇಲೆ ಪೋಲೀಸರ ಮೇಲೆ ಕೇಸನ್ನೋ ಅಥವಾ ಕಟ್ಟಳೆಯನ್ನೋ ಹಾಕಲಾಗುವುದು.

ಶ್ರೀ ಬಿ. ಬಸವಲಿಂಗಪ್ಪ —ಮಾನ್ಯ ಮುಖ್ಯ ಮಂತ್ರಿಗಳು ಈ ಸಾವುಗಳ ಬಗ್ಗೆ ವಿವರವನ್ನು ಕೊಡುತ್ತಾ ಒಂದು ಮುಖ್ಯವಾದ ವಿಚಾರವನ್ನು ಹೇಳುವುದಕ್ಕೆ ಬಿಟ್ಟಿದ್ದಾರೆ. ಅದೇನೆಂದರೆ ಕತ್ತಿಗೆ ಸರಪಳಿ ಹಾಕಿಕೊಂಡೋ ಅಥವಾ ಧೋತಿ ಕಟ್ಟಿಕೊಂಡು ಸಾಯುವಂಥಾದ್ದು ಈ ರೀತಿಯ ಏನು ಪ್ರಯತ್ನಗಳು ಇದ್ದಾವೆ, ಅದನ್ನು ಪೋಸ್ಟ್ ಮಾರ್ಟಂ ಮಾಡಲೇಬೇಕು. ಮರಣಾನಂತರ ಪರೀಕ್ಷೆ ಮಾಡದೇ ಹೋದರೆ ಯಾವ ರೀತಿ ಸತ್ತಿದ್ದಾರೆ ಎನ್ನುವುದು ಗೊತ್ತಾಗದೇ ಹೋಗತಕ್ಕಂಥ ಪ್ರಸಂಗಗಳು ಉಂಟು. ಅವರು ಸತ್ತ ಮೇಲೆ ಮಾಡತಕ್ಕಂಥದ್ದು ಪೋಸ್ಟ್ ಮಾರ್ಟಂ ಮಾಡಿದರೆ ಅದರ ಗುರುತು ಸಿಗುವುದಿಲ್ಲ. ಇನ್ನೂ ಜೀವಂತ ಇರುವಾಗ ಹಾಕಿಕೊಂಡು ಸತ್ತರೆ ಗುರುತುಗಳು ಇರುತ್ತದೆ. ಆದ್ದರಿಂದ ಮರಣಾನಂತರ ಪರೀಕ್ಷೆ ಮಾಡಿಸಿದ್ದೀರೋ ಅಥವಾ ಇಲ್ಲವೋ ಎನ್ನುವುದರ ಬಗ್ಗೆ ವಿವರಣೆಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಅದಕ್ಕೆ ವಿವರಗಳು ಏನೂ ಇಲ್ಲ. ಪ್ರತಿಯೊಂದನ್ನು ಕೂಡಾ ಮರಣಾನಂತರ ಪರೀಕ್ಷೆಯನ್ನು ಮಾಡಿಸಲಾಗಿದೆ. ಅದನ್ನು ಮಾಡಿಸದೇ ಮ್ಯಾಜಿಸ್ಟ್ರೇಟ್ ಈ ತೀರ್ಮಾನಕ್ಕೆ ಬರುವುದಿಲ್ಲ.

ಐ. ಪಿ. ಪಿ. ಅಡಿಯಲ್ಲಿ ಕಟ್ಟಡಗಳ ನಿರ್ಮಾಣ.

೧೩೨೭. ಶ್ರೀ ಎಂ. ವೀರಯ್ಯ ಸ್ವಾಮಿ (ಚಿಂಚೋಳಿ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಕುಟುಂಬ ಕಲ್ಯಾಣ ಕಾರ್ಯಕ್ರಮದ ಹಿನ್ನೆ ಯೋಜನೆ ಯಡಿಯಲ್ಲಿ ಕೈಗೊಂಡ ವಿವಿಧ ಕಟ್ಟಡಗಳ ವಿವರಗಳನ್ನು ಒದಗಿಸುವುದು.

ಆ) ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಸದರಿ ಯೋಜನೆಗಾಗಿ ಮಂಜೂರಾಗಿರುವ ಒಟ್ಟು ಮೊತ್ತವೆಷ್ಟು ?

ಇ) ಈ ಯೋಜನೆ ಮೇರೆಗೆ ರಾಜ್ಯ ಸರ್ಕಾರದವರು ನಿರ್ಮಿಸಿರುವ ಕಟ್ಟಡಗಳೆಷ್ಟು ? ಹಾಗೂ ಅವುಗಳ ಖರ್ಚೆಷ್ಟು ?